ಕ್ರಮ ಸಂಖ್ಯೆ	ಕಂಪನಿಯ ಹೆಸರು	ವಿದ್ಯುತ್ ಖರೀದಿಯ ಪ್ರಮಾಣ ಮೆ.ವ್ಯಾ.ಗಳಲ್ಲಿ
1	ಮೆ:ಬಿ.ಎಂ.ಎಂ.ಇಸ್ಪಾಟ್ ಲಿ. (ಕರ್ನಾಟಕ)	30
2	ಮೆ:ಜೆ.ಎಸ್.ಡಬ್ಲ್ಯೂ. ಪಿಟಿಸಿಎಲ್ (ಕರ್ನಾಟಕ)	500
3	ಮೆ: ಎನ್.ಇ.ಟಿ.ಸಿ. (ಛತ್ತೀಸ್‌ಘಡ್)	150
4	ಮೆ: ಎನ್.ಇ.ಟಿ.ಸಿ. (ಛತ್ತೀಸ್‌ಘಡ್)	100
5	ಮೆ: ಜಿ.ಯು.ವಿ.ಎನ್.ಎಲ್ (ಗುಜರಾತ್)	500
	ಒಟ್ಟು	**1280**

ಈ) ವಿದ್ಯುತ್ ವ್ಯವಸ್ಥೆಯ ಸ್ಥಿರತೆಯನ್ನು ಕಾಪಾಡಲು ಮತ್ತು ಗ್ರಿಡ್ ಫ್ರಿಕ್ವೆನ್ಸಿಯು ನಿಗದಿತ ಮಟ್ಟಕ್ಕಿಂತ ಕೆಳಗಿಳಿಯದಂತೆ ನೋಡಿಕೊಳ್ಳಲು ಹಾಗೂ ವಿದ್ಯುತ್ ವ್ಯವಸ್ಥೆ ಸಂಪೂರ್ಣವಾಗಿ ಕುಸಿಯುವುದನ್ನು ತಡೆಗಟ್ಟಲು ವಿದ್ಯುತ್ ಬಳಕೆಯನ್ನು ನಿಯಂತ್ರಿಸುವುದು ಅತ್ಯವಶ್ಯಕವಾಗಿರುತ್ತದೆ. ರಾಜ್ಯದಲ್ಲಿನ ವಿದ್ಯುತ್ ಲಭ್ಯತೆ ಮತ್ತು ಉತ್ಪಾದನೆಯಲ್ಲಿ ವೈಪರಿತ್ಯ ಕಾಣಿಸಿಕೊಂಡ ಸಂದರ್ಭದಲ್ಲಿ ಲಭ್ಯತೆ ಮತ್ತು ಬೇಡಿಕೆ ನಡುವಿನ ಅಂತರವನ್ನು ಸರಿದೂಗಿಸಲು ಅಲ್ಪಾವಧಿಗೆ ವಿದ್ಯುತ್ ಪೂರೈಕೆಯಲ್ಲಿ ಕೊರತೆಯಾಗುವುದು ಅನಿವಾರ್ಯವಾಗಿರುತ್ತದೆ.

ಸೇಡಂ ಪಟ್ಟಣದಲ್ಲಿರುವ ಉಪ ಕಾರಾಗೃಹ ಪ್ರಾರಂಭಿಸುವುದು

117 (209) ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಗುಲಬರ್ಗಾ ಜಿಲ್ಲೆ, ಸೇಡಂ ಪಟ್ಟಣದಲ್ಲಿರುವ ಉಪ ಕಾರಾಗೃಹ (Sub-Jail) ಪ್ರಾರಂಭಿಸದೇ ಇರುವುದರಿಂದ ಈ ಭಾಗದ ಖೈದಿಗಳಿಗೆ

ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು. ಮಾಹಿತಿ ನೀಡುವುದು?

ಶ್ರೀ ಎ. ನಾರಾಯಣಸ್ವಾಮಿ (ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು) :

ಅ) ಹೌದು.

ಸೇಡಂ ತಾಲ್ಲೂಕು ಉಪ ಕಾರಾಗೃಹದ ಕಟ್ಟಡಕ್ಕೆ ದುರಸ್ತಿ ಹಾಗೂ ನವೀಕರಣ ಕಾಮಗಾರಿಗಳು ಅಗತ್ಯವಿರುತ್ತವೆ. ಅಲ್ಲದೆ ಕಾರಾಗೃಹದ ಸುತ್ತಲಿನ ಕಾಂಪೌಂಡ್ ಗೋಡೆಯು ಕೇವಲ 8 ಅಡಿ ಎತ್ತರವಿದ್ದು ಭದ್ರತಾ ದೃಷ್ಟಿಯಿಂದ ಅದನ್ನು 20 ಅಡಿಗಳಷ್ಟು ಎತ್ತರಿಸುವುದು ಅಗತ್ಯವಿರುತ್ತದೆ. ಕಾರಾಗೃಹಗಳ ದುರಸ್ತಿ ಹಾಗೂ ನವೀಕರಣಕ್ಕೆ ಹೆಚ್ಚಿನ ಅನುದಾನ ದೊರೆಯದೇ ಇರುವುದರಿಂದ ಪ್ರಸ್ತಾಪಿತ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

ಅನುದಾನ ಬಿಡುಗಡೆಯನ್ನಾಧರಿಸಿ ಲೋಕೋಪಯೋಗಿ ಇಲಾಖೆಯವತಿಯಿಂದ ಕಾಮಗಾರಿಗಳನ್ನು ಕೈಗೊಂಡು ಶೀಘ್ರವಾಗಿ ಕಾರಾಗೃಹವನ್ನು ಪ್ರಾರಂಭಿಸಲಾಗುವುದು.

ಸಿಂಧನೂರು ನಗರದಲ್ಲಿ ಕೊಳಚೆ ಪ್ರದೇಶಗಳು

118 (270) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸಿಂಧನೂರು ಪಟ್ಟಣದಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ಮತ್ತು ಯಾವುವು (ವಿವರಗಳನ್ನು ನೀಡುವುದು);

ಆ) ಸಿಂಧನೂರು ಪಟ್ಟಣದಲ್ಲಿರುವ ಕೊಳಚೆ ಪ್ರದೇಶಗಳ ಜನರಿಗೆ ಸರ್ಕಾರದ ಯಾವ ಯಾವ ಯೋಜನೆಗಳಿಂದ ಮನೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ವಿವಿಧ ಯೋಜನೆಗಳಡಿ ನಿರ್ಮಿಸುತ್ತಿರುವ ಮನೆಗಳ ಕಾಮಗಾರಿಯು ಈಗ ಯಾವ ಹಂತದಲ್ಲಿದೆ.